**ಸಾಕ್ಷಿಗೆ ದಿನಾಂಕಃ08-07-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.SVA ವಕೀಲರಿಂದ ::**

ಪ್ರತಿವಾದಿಗಳು ನನ್ನ ಚಿಕ್ಕಪ್ಪ ಶಂಕರಪ್ಪ ರವರ ಮಕ್ಕಳು ಎಂದರೆ ಸರಿ. ನನ್ನ ಅಜ್ಜನ ಹೆಸರು ಹನುಮಂತಪ್ಪ ಆಗಿರುತ್ತದೆ. ನನ್ನ ಅಜ್ಜನಿಗೆ ನನ್ನ ತಂದೆ ಕೆ ಹೆಚ್ ಗೋವಿಂದಪ್ಪ, ಪ್ರತಿವಾದಿಗಳ ತಂದೆ ಶಂಕರಪ್ಪ ಮಕ್ಕಳಾಗಿರುತ್ತಾರೆ. ನನ್ನ ತಂದೆಗೆ ಶ್ರೀನಿವಾಸ್ ಮೂರ್ತಿ, ನರಸಿಂಹಮೂರ್ತಿ, ವಾಸುದೇವ ಮತ್ತು ನಾನು ಸೇರಿ 4 ಜನ ಮಕ್ಕಳು ಇರುತ್ತಾರೆ. ನನ್ನ ಸಹೋದರರಾದ ಶ್ರೀನಿವಾಸ್ ಮೂರ್ತಿ, ನರಸಿಂಹಮೂರ್ತಿ, ವಾಸುದೇವ ರವರು ಮೃತರಾಗಿರುತ್ತಾರೆ.

1 ನೇ ವಾದಿ ನನ್ನ ಸಹೋದರ ಶ್ರೀನಿವಾಸ್ ಮೂರ್ತಿ ರವರ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. 2 ನೇ ವಾದಿ ನನ್ನ ಸಹೋದರ ನರಸಿಂಹ ಮೂರ್ತಿ ರವರ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. 3 ನೇ ವಾದಿ ನನ್ನ ಸಹೋದರ ವಾಸುದೇವ ರವರ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಶಂಕರಪ್ಪ ರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಶಂಕರಪ್ಪ ರವರಿಗೆ 5 ಜನ ಗಂಡು ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಏನೆಲ್ಲಾ ವಿಚಾರಗಳು ಬರೆದಿರುತ್ತದೆ ಎನ್ನುವ ಬಗ್ಗೆ ನನಗೆ ತಿಳಿದಿರುತ್ತದೆ. ನನ್ನ ಚಿಕ್ಕಪ್ಪ ಶಂಕರಪ್ಪ ರವರಿಗೆ 3 ಜನ ಪ್ರತಿವಾದಿಗಳನ್ನು ಹೊರತುಪಡಿಸಿ ಕೆ ಎಸ್ ನಾಗರಾಜಪ್ಪ ಮತ್ತು ಕೆ ಎಸ್ ಕೃಷ್ಣಮೂರ್ತಿ ಎನ್ನುವ ಮಕ್ಕಳು ಇರುತ್ತಾರೆ ಎಂದರೆ ಸರಿ.

ನನ್ನ ಅಜ್ಜ ಹನುಮಂತಪ್ಪ ರವರಿಗೆ ಯಾವೆಲ್ಲಾ ಆಸ್ತಿಗಳು ಇದ್ದವು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಹನುಮಂತಪ್ಪ ರವರಿಗೆ ತರೀಕೆರೆ, ಕುಡ್ಲೂರು, ಹಿರಿಯಂಗಳ, ಬೀರೂರು ಗ್ರಾಮಗಳಲ್ಲಿ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಹನುಮಂತಪ್ಪ ರವರು ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಹನುಮಂತಪ್ಪ ರವರು ಯಾವ ಸಾಲಿನಲ್ಲಿ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹಿಂದೆ ರಾಜಸ್ವ ನಿರೀಕ್ಷಕರಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಅಜ್ಜ ಮೃತರಾದ ನಂತರ ನನ್ನ ತಂದೆ

ಹಾಗೂ ನನ್ನ ಚಿಕ್ಕಪ್ಪ ಶಂಕರಪ್ಪ ರವರಿಗೆ ಒಟ್ಟು ಕುಟುಂಬದ ಹಿರಿಯಂಗಳ ಗ್ರಾಮದ ಸರ್ವೇ ನಂಬರ್ 221 ರಲ್ಲಿ 1 ಎಕರೆ 7 ಗುಂಟೆ, ಬೀರೂರಿನಲ್ಲಿ 7 ಎಕರೆ 18 ಗುಂಟೆ ಮತ್ತು ಮನೆ, ಕುಡ್ಲೂರಿನಲ್ಲಿ ಸರ್ವೇ ನಂಬರ್ 71/1 ರಲ್ಲಿ 1 ಎಕರೆ 20 ಗುಂಟೆ ಮತ್ತು ಮನೆ ಮತ್ತು ದಾವಾ ಶೆಡ್ಯೂಲ್ ಸ್ವತ್ತುಗಳು ಬಂದಿರುತ್ತವೆ ಎಂದರೆ ಸಾಕ್ಷಿಯು ದಾವಾ ಶೆಡ್ಯೂಲ್ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಅಜ್ಜ ತೀರಿಕೊಂಡ ನಂತರದಲ್ಲಿ ನಮ್ಮ ಕುಟುಂಬದ ಕರ್ತ ನನ್ನ ತಂದೆ ಆಗಿದ್ದರು ಎಂದರೆ ಸರಿ. ನನ್ನ ಅಜ್ಜ ತೀರಿಕೊಂಡ ನಂತರದಲ್ಲಿ ನಮ್ಮ ಕುಟುಂಬದ ಆಸ್ತಿಗಳ ಖಾತೆಯು ಪೌತಿ ಆಧಾರದಲ್ಲಿ ನನ್ನ ತಂದೆಯ ಹೆಸರಿಗೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪ ಕುಟುಂಬದ ಆಸ್ತಿಗಳ ಬಗ್ಗೆ ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: